ಹೋಗ್ತಿದ್ದಾರೆ... ಇವಳು ನನ್ನ ಮಾನ ತೆಗೆಯೋಕೆ ಹುಟ್ಟಿದ್ದಾಳೆ' ಅಪ್ಪ ಅನ್ನುತ್ತಿದ್ದರು. 'ಇರಲಿ ಬಿಡಿ, ಅವಳೇನು ಕಲೆಕ್ಟರ್ ಆಗಬೇಕಾ? ಓದಿದ್ರೂ ಅಷ್ಟೆ... ಓದದೇ ಇದ್ರೂ ಅಷ್ಟೆ. ಹೆಣ್ಣಿಗೆ ಅಡುಗೆ ಮನೆಯೇ ಕಾಯಂ ಉದ್ಯೋಗ. ಅದನ್ನು ಕಲಿತರೆ ಸಾಕು' ಅಮ್ಮನ ವಾದ. 'ಏನಾದ್ರೂ ಇರಲಿ. ಅವಳು ಓದಬೇಕು ಅಷ್ಟೆ. ಒಂದು ಡಿಗ್ರಿ ಕೂಡ ಆಗದೇ ಇದ್ರೆ ಅವಳ ಮದುವೆ ಕೂಡ ಕಷ್ಟ ಆಗುತ್ತೆ. ನಾಳೆಯಿಂದ ಸ್ಕೂಲು ತಪ್ಪಿಸಬಾರದು' ಅಪ್ಪ ನಿರ್ಧಾರಯುತವಾಗಿ ಹೇಳುತ್ತಿದ್ದರು. ನಂತರ ಒಂದೆರಡು ವಾರ ಶಾಲೆಗೆ ಹೋಗುತ್ತಿದ್ದೆ. ಮತ್ತೆ ಯಥಾಪ್ರಕಾರ ಅಮ್ಮ ನನ್ನನ್ನು ಮನೆ ಕೆಲಸಕ್ಕೇ ಹಾಕಿರುತ್ತಿದ್ದಳು. ಆವತ್ತು...

'ವಾಸಂತೀ... ವಾಸಂತೀ...' ತಂದೆಯ ಘರ್ಜನೆ. 'ಯಾಕೇ ಎರಡು ವಾರದಿಂದ ಸ್ಕೂಲಿಗೆ ಹೋಗಿಲ್ಲ? ಹಾಂ... ನಿನ್ನ ಹೆಡ್ ಮಾಸ್ಟರ್ ಸಿಕ್ಕಿದ್ರು. ಬೊಗಳು... ಯಾಕೆ ಹೋಗಿಲ್ಲ...' ಅಂತ ಅಪ್ಪ ಕೈಯಲ್ಲಿ ಬೆತ್ತ ಹಿಡಿದು ಕೇಳುತ್ತಿದ್ದರೆ ವಾಸಂತಿಗೆ ಬಚ್ಚಲಿಗೆ ಅವಸರ. 'ಅವಳನ್ಯಾಕೆ ಬೈತೀರಿ. ಎರಡು ವಾರದಿಂದ ನಿಮ್ಮಕ್ಕ, ತಂಗಿ ಅವರ ಕುಟುಂಬ ಎಲ್ಲ ಇಲ್ಲೇ ತಾನೆ ಇದ್ದದ್ದು. ಅವರನ್ನೆಲ್ಲ ಯಾರು ನೋಡಬೇಕು? ಒಂದು ಸ್ವಲ್ಪ ಉಪ್ಪು, ಖಾರ ಹೆಚ್ಚು ಕಮ್ಮಿ ಆಗುವಂತಿಲ್ಲ, ನೀರು ಬಿಸಿ, ಹದ ಕೂಡ ನಾವೇ ನೋಡಬೇಕು. ಹೋಟೆಲಿಗೆ ಬಂದು ಹೋದಂತೆ ಇರ್ತಾರೆ. ನಾನೇ ವಾಸೀಗೆ ಇಲ್ಲೇ ಇರು, ಶಾಲೆ

